# ಕಲ್ಪತರುವಾಗಿ ಶ್ರೀರಾಮಕೃಷ್ಣ : ಒಂದು ವಿಮರ್ಶೆ

ಬ್ರಹ್ಮಚಾರಿ ಮುಕುಂದ

೧೮೮೬, ಜನವರಿ ೧ರಂದು ಕೊಲ್ಕತಾದ ಕಾಶಿಪುರದಲ್ಲಿ ಶ್ರೀರಾಮಕೃಷ್ಣರು ಗಾಢ ಆಧ್ಯಾತ್ಮಿಕ ಭಾವದಲ್ಲಿ ಭಕ್ತರನೇಕರನ್ನು ವಿಶೇಷ ರೀತಿಯಲ್ಲಿ ಆಶೀರ್ವದಿಸಿ ಅವರವರ ಮನೋವಾಂಛನೆಗಳನ್ನು ಪೂರ್ತಿಗೊಳಿಸಿದರು. ಆ ದಿನವನ್ನು ರಾಮಕೃಷ್ಣ ಆಶ್ರಮಗಳಲ್ಲಿ ಕಲ್ಪತರು ದಿನವೆಂದು ಆಚರಿಸಲಾಗುತ್ತದೆ. ಅದಕ್ಕೆ ಸಂಬಂಧಿಸಿದ ವಿಶೇಷ ಲೇಖನವಿದು. ಬ್ರ.ಮುಕುಂದ ಅವರು ಬೇಲೂರು ಮಠದ ಬ್ರಹ್ಮಚಾರಿಗಳ ತರಬೇತಿ ಕೇಂದ್ರದಲ್ಲಿದ್ದಾರೆ.

ಪುರಾಣಪ್ರಸಿದ್ಧ ಕಲ್ಪತರು ಯಾರಿಗೆ ತಿಳಿಯದು? ಅಸುರರಿಂದ ಪರಾಜಿತರಾಗಿ, ಸತತವಾಗಿ ಪೀಡಿಸಲ್ಪಟ್ಟು ಅವಮಾನಿತರಾದ ದೇವತೆಗಳು ಭಗವಂತನನ್ನು ಮೊರೆಹೊಕ್ಕರು. ಭಗವಂತನು ಅವರಿಗೆ ಸಮುದ್ರಮಥನ ಗೈದು ಅಮೃತ ಪಡೆದು ಸೇವಿಸಿ ಅಮರರಾಗುವ ಸಲಹೆ ನೀಡಿದನು. ಅದಕ್ಕೆ ಮುನ್ನ ಅವರನ್ನು ಹೀಗೆಂದು ಎಚ್ಚರಿಸಿದನು : "ನೋಡಿ, ಸಮುದ್ರಮಥನದ ಸಮಯದಲ್ಲಿ ಮೊದಲು ಉದ್ಭವಿಸುವುದೇ 'ಹಾಲಾಹಲ'ವೆಂಬ ಭಯಂಕರ ವಿಷ. ಅದರಿಂದ ವಿಚಲಿತರಾಗದೆ ಭಗವಂತನಲ್ಲಿ ಶರಣಾಗುವುದರ ಮೂಲಕ ಪಾರಾಗಿ. ನಂತರ ಲೋಭಗೊಳಿಸುವ ಅನೇಕ ದಿವ್ಯ ವಸ್ತುಗಳು ಹೊರಬರುತ್ತವೆ. ಅವಾವುದಕ್ಕೂ ಕೈಚಾಚದೆ ಮಥನಕಾರ್ಯ ಮುಂದುವರೆಸಿ. ಅಮೃತ ಸೇವಿಸಿ ಮೊದಲು ಅಮರರಾಗಿ.' ಹೀಗೆ ಮಥನದಿಂದ ಮೇಲೆದ್ದ ಅನೇಕ ದಿವ್ಯ ವಸ್ತುಗಳಲ್ಲಿ ಈ ಕಲ್ಪತರುವೂ ಒಂದು. ಅರ್ಥಶಾಸ್ತ್ರದ ಭಾಷೆಯಲ್ಲಿ ಹೇಳುವುದಾದರೆ ಇದೊಂದು ಉಪ-ಉತ್ಪನ್ನ (by-product). ಹೀಗಾಗಿ ಸಹಜವಾಗಿಯೇ ಇದೊಂದು ಗೌಣ ಮೌಲ್ಯದ ವಸ್ತು. ಇಷ್ಟಾದರೂ ಇದರ ಆಕರ್ಷಣೆ ಎಷ್ಟೆಂದರೆ ದೇವತೆಗಳು ಭಗವಂತನ ಎಚ್ಚರಿಕೆಯನ್ನೂ ಕಡೆಗಣಿಸಿ ಅದನ್ನು ತಮ್ಮ ಲೋಕಕ್ಕೆ ಒಯ್ದರು.

ನರಲೋಕದ ಕಥೆಯೂ ಇದೇ ರೀತಿ. ೧೮ನೆಯ ಶತಮಾನದ ಅಂತ್ಯ ಹಾಗೂ ೧೯ನೆಯ ಶತಮಾನದ ಆದಿಭಾಗಗಳಲ್ಲಿ ವೈಜ್ಞಾನಿಕ ನವನವೋನ್ವೇಷಣೆಯ ಪ್ರಭಾವದಿಂದಾಗಿ ಧರ್ಮವೇ ಮೂಲೋತ್ಪಾಟನಗೊಳ್ಳುವ ಸ್ಥಿತಿಯಲ್ಲಿತ್ತು. ನಾಸ್ತಿಕತೆ ಹಾಗೂ ಸಂಶಯ ವಾದಗಳು ಹೆಚ್ಚಿನ ಮಂದಿಯ ಮೆಚ್ಚುಗೆಗೆ ಪಾತ್ರವಾಗಿದ್ದವು. ಆಧ್ಯಾತ್ಮಿಕತೆಗೆ ತವರೂರಾದ ಭಾರತದಲ್ಲಿ ಆಗ ಸಹಜವಾಗಿಯೇ ದೇಶದ ಸಂಸ್ಕೃತಿಯ ರಕ್ಷಣೆಗಾಗೆಂದೇ ಅನೇಕ ಸಮಾಜಸುಧಾರಣಾ ಸಂಸ್ಥೆಗಳು ಹುಟ್ಟಿಕೊಂಡವು. ಆದರೆ ಇವುಗಳು ಮಾನವನ ಆಧ್ಯಾತ್ಮಿಕ ಉನ್ನತಿಗಾಗಿ ಶ್ರಮಿಸದೆ ಕೇವಲ ತಾತ್ಕಾಲಿಕವಾದ ಬಾಹ್ಯಸ್ತರದ ಸುಧಾರಣೆಗಳಲ್ಲಿಯೇ ನಿರತವಾಗಿದ್ದವು. ಅವರ ಸುಧಾರಣೆಯ ಭರದಲ್ಲಿ ಯುಗ ಯುಗಗಳಿಂದ ಭಾರತೀಯರ ಆಧ್ಯಾತ್ಮಿಕ ಶ್ರೇಯಸ್ಸಿಗೆ ಊರುಗೋಲಾಗಿದ್ದ ಅನೇಕ ಸಂಪ್ರದಾಯಗಳನ್ನು ಮೂಢನಂಬಿಕೆಗಳ ಪಟ್ಟಿಗೆ ಸೇರಿಸಿ, ಅವುಗಳನ್ನು ಸಮಾಜದಿಂದ ಕಿತ್ತೆಸೆಯಲು ಪ್ರಯತ್ನಿಸಿದರು. ಅಂತಹ ಸಮಯದಲ್ಲಿ ಸಾಧಕ ಸಮಾಜದ ಮೊರೆಗೆ ಓಗೊಟ್ಟೋ ಎಂಬಂತೆ ಮಾನವ ಕೋಟಿಯ ಮುಕ್ತಿಗಾಗೆಂದೇ ಮೇಲೆದ್ದಿತು, "ಶ್ರೀರಾಮಕೃಷ್ಣ"ವೆಂಬ ಅಮೃತ ಕಲಶ. ನೀಲಾಂಬರ ಬಾಬುವಿನ ತೋಟದ ಮನೆಯಲ್ಲಿ ತಂಗಿದ್ದ ಶ್ರೀಮಾತೆ ಶಾರದಾದೇವಿಯವರಿಗೆ ಇದಕ್ಕೆ ಪುಷ್ಟಿ ನೀಡುವಂತಹ ಒಂದು ದರ್ಶನವಾಯಿತು. ಒಂದು ಹುಣ್ಣಿಮೆಯ ರಾತ್ರಿ, ಶ್ರೀಮಾತೆಯವರು ಗಂಗಾ ಘಟ್ಟದ ಮೊದಲ ಮೆಟ್ಟಿಲ ಮೇಲೆ ಕುಳಿತು ಜ್ಯೋತಿರ್ಮಯ ನಿಶೆಯ ಸೊಬಗನ್ನು ಸವಿಯುತ್ತಿದ್ದಾರೆ. ಅವರ ಮನಸ್ಸು ಪ್ರಕೃತಿಯ ಸೌಂದರ್ಯವನ್ನು ಸವಿಯುವುದರಲ್ಲೇ ಸಂಪೂರ್ಣ ಮಗ್ನವಾಗಿದೆ. ಇದೇ ಸಮಯದಲ್ಲಿ ಅತ್ಯಂತ ಆಶ್ಚರ್ಯಕರವಾದ ದರ್ಶನವಾಯಿತು ಅವರಿಗೆ. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಅವರ ಹಿಂದಿನಿಂದ ಬಂದು ಮುನ್ನುಗ್ಗಿ ಗಂಗೆಯೊಳಗೆ ಇಳಿದು ಕರಗಿ ಹೋದರು. ಈಗ ಅವರ ಜ್ಯೋತಿರ್ಮಯ ಶರೀರ ಹಾಗೂ ಗಂಗೆಯ ನೀರು ಒಂದಾಯಿತು. ಶ್ರೀಮಾತೆಯವರು ಆಶ್ಚರ್ಯದಿಂದ ರೋಮಾಂಚಿತರಾಗಿ ಗಂಗೆಯನ್ನೇ ದಿಟ್ಟಿಸುತ್ತಿದ್ದಾರೆ. ಇದ್ದಕ್ಕಿದ್ದಂತೆ ಸ್ವಾಮಿ ವಿವೇಕಾನಂದರು ಎಲ್ಲಿಂದಲೋ ಎಂಬಂತೆ ಅಲ್ಲಿ ಪ್ರಕಟಗೊಂಡರು. ಅವರು ಆವೇಶಭರಿತರಾಗಿ, "ಜೈ ರಾಮಕೃಷ್ಣ! ಜೈ ರಾಮಕೃಷ್ಣ!" ಎಂದು ಘೋಷಿಸುತ್ತ ಸುತ್ತ ನೆರೆದ ಸಹಸ್ರಾರು ಜನರ ಮೇಲೆ ಆ ಗಂಗಾವಾರಿಯನ್ನು ಚಿಮುಕಿಸುತ್ತಿದ್ದಾರೆ. ಶ್ರೀಮಾತೆಯವರು ನೋಡುತ್ತಿರುವಂತೆಯೇ ಆ ಪಾವನ ಸಲಿಲ ಸ್ಪರ್ಶದಿಂದ ಜನರು ಈ ಜಗತ್ತಿನಿಂದ ಮುಕ್ತರಾಗುತ್ತಿದ್ದರು! ಆದ್ದರಿಂದ ಶ್ರೀರಾಮಕೃಷ್ಣರನ್ನು ಕಲ್ಪತರು ಎಂದು ಕರೆಯುವುದಕ್ಕಿಂತ ಸಮುದ್ರಮಥನದ ಕೊನೆಯಲ್ಲಿ ಬಂದ ಅಮೃತಕಲಶವೆಂದೇ ಕರೆಯಬೇಕು.

**ಶ್ರೀರಾಮಕೃಷ್ಣರ ಜೀವನ ಹಾಗೂ ಸಂದೇಶಗಳ ಸಾರ—ಅವರ ಭಾಷೆಯಲ್ಲೇ ಹೇಳಬೇಕಾದರೆ—"ಹೇಗಾದರೂ ಮಾಡಿ ಮೊದಲು ಅಜ್ಜಿಯನ್ನು ಮುಟ್ಟುವುದು", ಎಂದರೆ "ಭಗವತ್ಸಾಕ್ಷಾತ್ಕಾರ" ಅಥವಾ "ಆತ್ಮಸಾಕ್ಷಾತ್ಕಾರ"** ವನ್ನು ಪಡೆಯುವುದು. ಅವರ ದೃಷ್ಟಿಯಲ್ಲಿ ದರ್ಶನಗಳಿಗೂ ಮಹತ್ವವಿಲ್ಲ. ಇನ್ನು ಮಾನವನನ್ನು ಮತ್ತಷ್ಟು ಮತ್ತರನ್ನಾಗಿಸುವ, ಅವಿರತವಾದ ಅಜ್ಞಾನಚಕ್ರಕ್ಕೆ ಬಂಧಿಸುವ ಐಹಿಕ ಸಿರಿಸಂಪತ್ತುಗಳ ಕುರಿತು ಹೇಳಬೇಕಾಗಿಯೇ ಇಲ್ಲ. ಹಾಗಿದ್ದ ಮೇಲೆ ೧೮೮೬ರ ಜನವರಿ ೧ರಂದು ವಿಶೇಷ ಭಾವ ತಾಳಿದ ಶ್ರೀರಾಮಕೃಷ್ಣರು ಅಲ್ಲಿ ನೆರೆದಿದ್ದ ಭಕ್ತರಿಗೆ ವಿವಿಧ ದರ್ಶನಗಳನ್ನು ಮಾಡಿಸಲಿಲ್ಲವೇ? ಅದೂ ಅಲ್ಲದೆ ಉಪೇಂದ್ರನಾಥ ಮುಖ್ಯೋಪಾಧ್ಯಾಯನಿಗೆ ಐಹಿಕ ಸಮೃದ್ಧಿಯ ವರ ನೀಡಲಿಲ್ಲವೇ? ಎಂದರೆ ಆ ದಿನ ಒಂದಿಬ್ಬರಿಗೆ, "ಇಂದು ಬೇಡ, ಮುಂದೆ ನೋಡೋಣ" ಎಂದು ಹಾಗೆಯೇ ಕಳುಹಿಸಿದ್ದೂ ಉಲ್ಲೇಖವಾಗಿದೆ. ಇದರಿಂದ,

ಯಾವುದಕ್ಕೂ ಕಾಲ ಬರದೆ ಏನೂ ಆಗದು ಎಂಬುದಾಗಿ ತಿಳಿದು ಬರುತ್ತದೆ. ಅದೂ ಅಲ್ಲದೆ ಆ ದಿನ ಅವರ ಕೃಪೆಗೆ ಪಾತ್ರರಾದವರ ಜೀವನವನ್ನೊಮ್ಮೆ ಅಧ್ಯಯನ ಮಾಡಿದರೆ ತಿಳಿಯುತ್ತದೆ, ಶ್ರೀರಾಮ ಕೃಷ್ಣರು ಹೇಗೆ ಅವರ ಆಧ್ಯಾತ್ಮಿಕ ಜೀವನದ ಅಂಬಿಗರಾಗಿದ್ದ ರೆಂದು. ಅವರಲ್ಲಿ ಬಹುಮಂದಿಯನ್ನು ಶ್ರೀರಾಮಕೃಷ್ಣರು ತಮ್ಮ ದರ್ಶನದಲ್ಲಿ ಕಂಡಿದ್ದರು. ಆ ಭಕ್ತರು ಬಹಳ ಸಲ ಅವರ ಬಳಿಗೆ ಬಂದು ಹೋಗಿ ಮಾಡುತ್ತಿದ್ದರು. ಸರ್ವರ "ಅಂತರಾತ್ಮ ದೃಕ್"ರಾದ ಶ್ರೀರಾಮಕೃಷ್ಣರು ಆ ಭಕ್ತರ ಅನೇಕ ಲೋಪ ದೋಷಗಳನ್ನು ಗಮನಿಸಿ ಸರಿಪಡಿಸಿದ್ದರು. ಈ ದಿನ ಶ್ರೀರಾಮಕೃಷ್ಣರು ಅದಾಗಲೇ ತಕ್ಕಮಟ್ಟಿಗೆ ಸಾಧನಾಪಥದಲ್ಲಿ ಮುಂದುವರೆದಿದ್ದ ಆ ಭಕ್ತರ ಆಧ್ಯಾತ್ಮಿಕ ಅಡಚಣೆಗಳನ್ನು ಬದಿಗೆ ಸರಿಸಿ, ಅವರಿಗೆ ಇಷ್ಟದರ್ಶನ ಮಾಡಿಸುವುದರ ಮೂಲಕ ಅವರ ಸಾಧನೆಯ ಪಕ್ವತೆಗೆ ಬೇಕಾದ ಪ್ರೋತ್ಸಾಹ ಹಾಗೂ ಅಭಯಗಳನ್ನು ನೀಡಿರುತ್ತಾರೆ. ಸ್ವಾಮಿ ವಿವೇಕಾನಂದರು ರಚಿಸಿರುವ ಖಂಡನ ಭವ ಬಂಧನ ಸ್ತೋತ್ರದಲ್ಲಿ ಶ್ರೀರಾಮಕೃಷ್ಣರನ್ನು **ಯೋಗಸಹಾಯ್** ಎಂದು ಕರೆದಿರುವುದನ್ನು ಇಲ್ಲಿ ಸ್ಮರಿಸಬಹುದು.

"ಭೋಗ ಮುಗಿಯದೆ ಯೋಗ ಪ್ರಾರಂಭವಾಗದು" ಎಂದು ಶ್ರೀರಾಮಕೃಷ್ಣರು ಆಗಾಗ ಹೇಳುತ್ತಿದ್ದುದುಂಟು. ಹಾಗೆಂದ ಮಾತ್ರಕ್ಕೆ ಅವರು ಭೋಗವನ್ನು ಪ್ರೋತ್ಸಾಹಿಸುತ್ತಿದ್ದರು ಎಂದಲ್ಲ. ಶ್ರೀರಾಮಕೃಷ್ಣರ ಗೃಹೀಭಕ್ತನಾದ ಅಧರಲಾಲಸೇನ್ ಡೆಪ್ಯುಟಿ ಮೆಜಿಸ್ಟ್ರೇಟ್‌ನ ಹುದ್ದೆಯಲ್ಲಿದ್ದ. ಒಮ್ಮೆ ಈತ ತನಗೆ ಕಲ್ಕತ್ತ ನಗರ ಸಭೆಯ ಉಪಸಭಾಧ್ಯಕ್ಷನ ಹುದ್ದೆ ಸಿಗುವಂತೆ ಜಗನ್ಮಾತೆ ಯನ್ನು ಪ್ರಾರ್ಥಿಸುವಂತೆ ಶ್ರೀರಾಮಕೃಷ್ಣರನ್ನು ಕೇಳಿಕೊಂಡಿದ್ದ. ಶಿಶು ಸ್ವಭಾವದ ಶ್ರೀರಾಮಕೃಷ್ಣರು ಮೊದಮೊದಲು ಒಪ್ಪಿಕೊಂಡು ಜಗನ್ಮಾತೆಯನ್ನು ಪ್ರಾರ್ಥಿಸಿದರು. ಆದರೆ ನಂತರ ಹೇಳುತ್ತಾರೆ: "ಅವನದೆಂತಹ ಹೀನ ಬುದ್ಧಿ ನೋಡಮ್ಮ. ನಿನ್ನನ್ನು ಜ್ಞಾನ-ಭಕ್ತಿಗಳಿಗಾಗಿ ಪ್ರಾರ್ಥಿಸಿಕೊಳ್ಳದೆ ಇಂತಹವುಗಳಿಗಾಗಿ ಪ್ರಾರ್ಥಿಸು ತ್ತಿದ್ದಾನೆ." ಮತ್ತೆ ಮುಂದುವರಿಸುತ್ತ ಹೇಳುತ್ತಾರೆ: "ನಿವೃತ್ತಿಯೇ ಒಳ್ಳೆಯದು, ಪ್ರವೃತ್ತಿಯಲ್ಲ" (**ಶ್ರೀರಾಮಕೃಷ್ಣ ವಚನವೇದ**, ಭಾಗ ೧, ಪು. ೫೯೪). ಇಷ್ಟಾದರೂ ಉಪೇಂದ್ರನಿಗೆ ತಮ್ಮ ಈ ಮೇಲಿನ ಸೂತ್ರವನ್ನನುಸರಿಸಿಯೇ ಆ ದಿನ ಆ ರೀತಿ ಆಶೀರ್ವದಿಸಿದರು ಎನ್ನಬೇಕಾಗುತ್ತದೆ. ಆದರೆ ಆತನಿಗೆ ಕೇವಲ ಐಹಿಕಧನವನ್ನಷ್ಟೆ ಕೊಡದೆ ಅಯಾಚಿತವಾಗಿ ಭಕ್ತಿಧನವನ್ನೂ ಕರುಣಿಸಿರುತ್ತಾರೆ. ಆತನ ಜೀವನಚರಿತ್ರೆಯನ್ನು ಬರೆದ ಲೇಖಕರೊಬ್ಬರೆನ್ನುತ್ತಾರೆ : "....ಆದರೆ, ಓದುಗರು ಉಪೇಂದ್ರನು ಕೇವಲ ಧನಪಿಪಾಸುವೆಂದು ಬಗೆದರೆ ಅನ್ಯಾಯವಾದೀತು. ಆತನಿಗೆ ಧನಲಾಭದ ಮಹದಾಸೆ ಯಿತ್ತೆಂಬುದು ದಿಟವಾದರೂ ಶ್ರೀರಾಮಕೃಷ್ಣರ ಮೇಲೆ ಯಥಾರ್ಥ ಭಕ್ತಿಯೂ ಇತ್ತೆಂಬುದು ಆತನ ಜೀವನದಿಂದ ತಿಳಿದುಬರುತ್ತದೆ" (*They Lived with God*, Swami Chetanananda, ed. 1993, p 325). ತಾನು ಬದುಕಿರುವವರೆಗೂ ಆತ ಶ್ರೀರಾಮ ಕೃಷ್ಣರ ಯುವ ಸಂನ್ಯಾಸಿ ಶಿಷ್ಯರಿಗೆ ಧನಸಹಾಯ ನೀಡುತ್ತಿದ್ದ.

"ಕಲ್ಪತರು" ಶಬ್ದಕ್ಕೆ ಎರಡು ಅರ್ಥಗಳಿವೆಯೆಂದು ತಿಳಿದು ಬರುತ್ತದೆ. ಮೊದಲನೆಯದು, ಆಗಲೇ ತಿಳಿಸಿದಂತೆ ಒಳ್ಳೆಯದೊ, ಕೆಟ್ಟದ್ದೊ—ಬೇಡಿದ್ದನ್ನು ವಿಚಾರಿಸದೆ ಕೊಡುವ ದೇವಲೋಕದ ವೃಕ್ಷವಿಶೇಷ. ಅದು ಬೇಡಿದ್ದನ್ನೆಲ್ಲ ನೀಡುವುದು ಹೌದಾದರೂ, ಆಧ್ಯಾತ್ಮಿಕ ಅನುಭವಗಳನ್ನು ಮಾಡಿಸಿಕೊಡುವ ಮಾತಿನಲ್ಲಿ ಸಂಶಯ ವಿದೆ. ೧೮೮೬ರ ಜನವರಿ ೧ರಂದು ಶ್ರೀರಾಮಕೃಷ್ಣರು ಭಕ್ತರ ಕಲ್ಪತರು ವಾಗಿದ್ದರೆಂಬುದು ಭಕ್ತಪ್ರಮುಖರಾದ ರಾಮಚಂದ್ರದತ್ತನೇ ಮೊದ ಲಾದವರ ಅಭಿಪ್ರಾಯ. ಶ್ರೀರಾಮಕೃಷ್ಣರಿಗೆ ಮೇಲಿನ ಅರ್ಥದಲ್ಲಿ "ಕಲ್ಪತರು" ಎಂಬ ಬಿರುದು ಸರಿಹೋಗದು. ಅವರನ್ನು ಆ ಅರ್ಥದಲ್ಲಿ ಕಲ್ಪತರುವಾಗಿ ಆರಾಧಿಸಿದರೆ ನಷ್ಟ ನಮ್ಮದೇ. ಅಮೂಲ್ಯವಾದ ಉಡುಗೊರೆಯನ್ನು ಕೊಡಲು ಉತ್ಸುಕನಾದವನನ್ನು ಅಲ್ಪಮೌಲ್ಯದ ವಸ್ತುವಿಗಾಗಿ ಕೇಳಿದಂತಾಗುತ್ತದೆ. ಎರಡನೆಯದಾಗಿ, ಬಹಳ ಉದಾರಿ ಯಾದವನೆಂಬ ಅರ್ಥದಲ್ಲೂ "ಕಲ್ಪತರು" ಎಂಬುದು ಬಳಸಲ್ಪಡುತ್ತದೆ. ನಿಶ್ಚಯವಾಗಿಯೂ ಶ್ರೀರಾಮಕೃಷ್ಣರು ಬಹಳ ಉದಾರಿಗಳೇ. ದಾನಗಳಲ್ಲಿ ಅತ್ಯುತ್ತಮವಾದ ಆಧ್ಯಾತ್ಮಿಕ ದಾನ ನೀಡಿದವರಲ್ಲವೆ ಅವರು? ಜನವರಿ ೧ರಂದು ಎಲ್ಲ ಭಕ್ತರನ್ನುದ್ದೇಶಿಸಿ ಅವರು ಆಶೀರ್ವದಿಸುತ್ತಾರೆ : "**ನಿಮಗೆ ಆಧ್ಯಾತ್ಮಿಕ ಜಾಗೃತಿಯುಂಟಾಗಲಿ**" ಎಂದು. ತಮ್ಮ ನರಲೀಲೆಯ ಅಂತಿಮ ಅಂಕದಲ್ಲಿ, ಮರಣಾಂತಿಕ ಗಂಟಲ ಕ್ಯಾನ್ಸರ್‌ನಿಂದ ತೀವ್ರ ಯಾತನೆ ಅನುಭವಿಸುತ್ತಿರುವ ಸಮಯದಲ್ಲಿ, ಅವರ ಶಿಷ್ಯರು ಅವರನ್ನು ಮಾತನಾಡದಿರುವಂತೆ ಪ್ರಾರ್ಥಿಸುತ್ತಾರೆ. ಆದರೆ ನರವತ್ಸಲ ರಾಮಕೃಷ್ಣರು ಕೂಡಲೇ ನುಡಿಯುತ್ತಾರೆ : "ನನಗದರ ಪರಿವೆ ಇಲ್ಲ. ಕೇವಲ ಒಬ್ಬ ಮನುಷ್ಯ ನಿಗಾದರೂ ಸಹಾಯವಾಗುವಂತಾದರೆ ನಾನು ಇಪ್ಪತ್ತು ಸಾವಿರ ಜನ್ಮ ಗಳನ್ನು ಬೇಕಾದರೆ ಎತ್ತಬಲ್ಲೆ" (*Ramakrishna as we Saw Him*: Swami Chetanananda, p.16). ಅವರೇ ತಿಳಿಸುವಂತೆ ಮುಂದಿನ ಪೀಳಿಗೆಗೆ ಆಗಲೇ ಅವರು ಅಡುಗೆ ತಯಾರಿಸಿದ್ದಾರೆ. ಮುಂದೆ ಬರುವವರು ಸುಮ್ಮನೆ ಉಂಡರಾಯಿತು. ಒಮ್ಮೆ ತಮ್ಮ ಗಂಟಲ ರೋಗದ ಕಾರಣವನ್ನು ತಿಳಿಸುತ್ತ ಹೇಳುತ್ತಾರೆ : "ನಾನು ನಿಮ್ಮೆಲ್ಲರ ಪರವಾಗಿ ಯಾತನೆಯನ್ನು ಅನುಭವಿಸುತ್ತಿದ್ದೇನೆ. ಇಡೀ ಜಗತ್ತಿನ ದುಃಖವನ್ನು ನನ್ನ ಮೇಲೆ ತೆಗೆದುಕೊಂಡಿರುವೆ" (ಅಲ್ಲೇ. ಪು. ೨೭). ಕಲ್ಪತರು ದಿನದ ಘಟನೆಯನ್ನು ಕುರಿತ ಸ್ವಾಮಿ ಶಿವಾ ನಂದರ ಅಭಿಪ್ರಾಯವೊಂದು ಇಲ್ಲಿ ಉಲ್ಲೇಖನೀಯವಾಗಿದೆ.

**ಭಕ್ತ** : "ಅಂದು ಅವರು ಸಾಕ್ಷಾತ್ ಕಲ್ಪತರುವೇ ಆಗಿಬಿಟ್ಟರು. ಎಷ್ಟೊಂದು ಜನ ಭಕ್ತರಿಗೆ ಕೃಪೆ ಮಾಡಿದರು!"

**ಸ್ವಾಮಿ ಶಿವಾನಂದರು** : "ಅಂದು ಮಾತ್ರ ಏಕೆ ಅವರು ಕಲ್ಪತರು? ಹಾಗೇನೂ ಅಲ್ಲ. ಅವರು ಸದಾಕಾಲವೂ ಕಲ್ಪತರುವೇ. ಜೀವರಿಗೆ ಕೃಪೆ ಮಾಡುವುದೇ ಅವರ ಏಕಮಾತ್ರ ಕಾರ್ಯ. ನಾವು ಕಣ್ಣಾರೆ ಕಂಡಿದ್ದೇವೆ, ಅವರು ನಿತ್ಯವೂ ಅದೆಷ್ಟು ಜೀವರಿಗೆ ಅದೆಂತೆಂತಹ ಭಾವಗಳಿಂದ ಕೃಪೆ ತೋರುತ್ತಿದ್ದರು! ಹೌದು, ಕಾಶಿಪುರದ ತೋಟದಲ್ಲಿ ಅಂದು ಅವರು ಒಂದೇ ಏಟಿಗೆ ಅನೇಕ ಭಕ್ತರಿಗೆ ಕೃಪೆದೋರಿದರು.

ಆ ದೃಷ್ಟಿಯಿಂದ ಈ ದಿನಕ್ಕೆ ಒಂದು ವಿಶೇಷವಿದೆ. ಏಕೆಂದರೆ ಆ ದಿನ ಅವರು ಎಂಥ ಬೃಹತ್ ಪ್ರಮಾಣದಲ್ಲಿ ಕೃಪಾಸಿಂಧುವಾಗಿದ್ದರೆಂದರೆ, ಆ ಒಂದೇ ಘಟನೆಯಿಂದ ಭಕ್ತರಿಗೆಲ್ಲ ಅವರ ಅಪಾರ ಕೃಪೆಯ ಅರಿವು ಪ್ರತ್ಯಕ್ಷವಾಗಿ ಹೋಯಿತು." (ಗುರುವಿನೊಡನೆ ದೇವರಡಿಗೆ ಭಾಗ-೨, ಪು.೩೯-೪೦)

ಶ್ರೀರಾಮಕೃಷ್ಣರ ಜೀವನ-ಸಂದೇಶಗಳು, ಅವರಾಡಿದ ದಿವ್ಯ ಲೀಲೆಗಳು ನಮ್ಮ ಆಧ್ಯಾತ್ಮಿಕ ಜೀವನವನ್ನು ರೂಪಿಸುವ ಕುಶಲ ಶಿಲ್ಪಿಯ ಉಳಿಯಂತಿವೆ. ಆಧ್ಯಾತ್ಮಿಕ ಪಥದಲ್ಲಿ ನಡೆಯಲು ಬಯಸುವ ಸಾಧಕರಿಗೆ ಉತ್ಸಾಹ ಮತ್ತು ಅಭಯದಾನ ನೀಡುತ್ತವೆ. ಅವರ ಉಪದೇಶಗಳು ಕಲ್ಪತರುವಿನ ಬೀಜಗಳು. ಅವನ್ನು ಹಸನುಗೊಳಿಸಿದ ಹೃದಯಕ್ಷೇತ್ರದಲ್ಲಿ ಬಿತ್ತಿ ಅಮೃತಫಲವನ್ನೇ ಗಳಿಸಿ ಸವಿಯೋಣ. ಮತ್ತು ಜನವರಿ ೧ನ್ನು "ಕಲ್ಪತರು ದಿವಸ"ವೆಂದು ಕರೆಯುವುದಕ್ಕೆ ಬದಲು "ಅಭಯದಾನ ನೀಡಿದ ದಿನ"ವೆಂದು ಕರೆದರೆ ಸೂಕ್ತವಾದೀತು. ಅದಕ್ಕೆ ವಿವರಣೆಯಾಗಿ ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿ ಹೀಗೆ ಬರೆಯುತ್ತಾರೆ : "ರಾಮಚಂದ್ರ ಹಾಗೂ ಇನ್ನಿತರ ಭಕ್ತರು ಇಂದಿನ ಈ ಘಟನೆಯನ್ನು ಶ್ರೀರಾಮಕೃಷ್ಣರು 'ಕಲ್ಪತರು' ವಾದ ದಿನವೆಂದು ನಿರ್ದೇಶಿಸಿರುತ್ತಾರೆ. ಆದರೆ ನಮಗನಿಸುತ್ತದೆ, ಅದನ್ನು ಶ್ರೀರಾಮಕೃಷ್ಣರ ಅಭಯ-ಪ್ರಕಾಶ ಅಥವಾ ಆತ್ಮಪ್ರಕಾಶಗೊಳಿಸುವುದರ ಮೂಲಕ ಎಲ್ಲರಿಗೂ ಅಭಯ ಪ್ರದಾನ ಮಾಡಿದ ದಿನವೆಂದು ಕರೆದಲ್ಲಿ ಹೆಚ್ಚು ಯುಕ್ತಿಯುಕ್ತವಾಗುತ್ತದೆ, ಎಂದು. ಒಂದು ಹೇಳಿಕೆ ಇದೆ, ಒಳ್ಳೆಯದೊ, ಕೆಟ್ಟದ್ದೊ— ಯಾವುದನ್ನು ಪ್ರಾರ್ಥಿಸಿದರೂ ಕಲ್ಪತರು ಅದನ್ನು ನೀಡುತ್ತದೆ ಎಂದು. ಆದರೆ ಶ್ರೀರಾಮಕೃಷ್ಣರು ಈ ರೀತಿಯಾಗಿ ಮಾಡಲಿಲ್ಲ. ಅವರು ಈ ಘಟನೆಯಿಂದ ತಮ್ಮ ದೇವತ್ವವನ್ನೂ, ಅಭಯದಾನ ಸಾಮರ್ಥ್ಯವನ್ನೂ ವ್ಯಕ್ತಗೊಳಿಸಿರುತ್ತಾರೆ." (ಶ್ರೀರಾಮಕೃಷ್ಣ ಲೀಲಾ ಪ್ರಸಂಗ, ಭಾಗ ೨, ಪು.೪೭೬).

## ಸಾಕ್ಷಾತ್ ಜಗಜ್ಜನನಿ



ಸ್ವಾಮಿ ಅತುಲಾನಂದರು (ಗುರುದಾಸ್ ಮಹಾರಾಜ್) ಹಾಲೆಂಡ್ ದೇಶದಲ್ಲಿ ಜನಿಸಿ, ಸ್ವಾಮಿ ವಿವೇಕಾನಂದ, ಸ್ವಾಮಿ ತುರೀಯಾನಂದ, ಸ್ವಾಮಿ ಅಭೇದಾನಂದರೇ ಮೊದಲಾದ ಶ್ರೀರಾಮಕೃಷ್ಣರ ನೇರ ಶಿಷ್ಯರಿಂದ ಸ್ಫೂರ್ತಿಪಡೆದು ಸಂನ್ಯಾಸಿಯಾದವರು. ಅವರು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದರು. ಅವರ ಮಂತ್ರದೀಕ್ಷೆಯ ಬಗ್ಗೆ ಅವರ ಸೇವೆ ಮಾಡುತ್ತಿದ್ದ ಬ್ರಹ್ಮಚಾರಿ (ಈಗ ಶ್ರೀರಾಮಕೃಷ್ಣ ಮಹಾಸಂಘದ ಹಿರಿಯ ಸಾಧುಗಳು) ಪ್ರಶ್ನಿಸಿದರು: "ಮಹಾರಾಜ್, ನೀವು ಶ್ರೀಮಾತೆಯವರಿಂದ ದೀಕ್ಷೆ ಪಡೆದಿರಿ. ನಿಮಗೆ ಬಂಗಾಳಿ ಭಾಷೆ ಬರುವುದಿಲ್ಲ. ಮಾತೆಯವರಿಗೆ ಇಂಗ್ಲಿಷ್ ಬರುವುದಿಲ್ಲ. ಹೀಗಿರುವಾಗ ಹೇಗೆ ದೀಕ್ಷೆ ಪಡೆದಿರಿ?"

ಈ ಪ್ರಶ್ನೆ ಕೇಳಿದ ತಕ್ಷಣ ಗುರುದಾಸ್ ಮಹಾರಾಜರು ಗಂಭೀರ ಮುಖಭಾವ ತಾಳಿದರು. ಅವರ ಕಣ್ಣುಗಳಿಂದ ಅಶ್ರುಧಾರೆ ಸುರಿಯತೊಡಗಿತು. ಅನಂತರ ಅವರು ಹೇಳಿದರು: "ಶ್ರೀಮಾತೆಯವರೆಂದರೆ ಏನೆಂದುಕೊಂಡಿರುವೆ? ಅವರು ಸಾಕ್ಷಾತ್ ಜಗಜ್ಜನನಿ. ಸ್ವಾಮಿ ತುರೀಯಾನಂದರಿಂದ ಹಾಗೂ ಸ್ವಾಮಿ ಅಭೇದಾನಂದರಿಂದ ನನಗೆ ಅವರ ಮಹಿಮೆ ತಿಳಿದಿತ್ತು. ಅವರಲ್ಲಿ ಶ್ರದ್ಧೆ ಬಲಗೊಂಡಿತ್ತು. ದೀಕ್ಷೆ ಪಡೆಯುವ ಮೊದಲ ದಿನವೆಲ್ಲ ನಾನು ಚಡಪಡಿಸುತ್ತಿದ್ದೆ. ನಾನು ದೀಕ್ಷೆ ಪಡೆಯಲಿರುವುದು ಯಾರಿಂದ? ಅವತಾರ ಪುರುಷರಾದ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಪೂಜಿಸಲ್ಪಟ್ಟ ಅವರ ಸಹಧರ್ಮಿಣಿಯಿಂದ! ಶ್ರೀರಾಮಕೃಷ್ಣರು ಮಹಿಮಾನ್ವಿತರು, ನಿಜ, ಆದರೆ ಅವರ ಹನ್ನೆರಡು ವರ್ಷಗಳ ಕಠೋರ ಸಾಧನೆಯ ಫಲವನ್ನೆಲ್ಲ ಸ್ವೀಕರಿಸಿದ ಶ್ರೀಮಾತೆಯವರ ಶಕ್ತಿ ಎಂಥದಾಗಿರಬೇಕು! ಅಂಥವರಿಂದ ನಾನು ದೀಕ್ಷೆ ಸ್ವೀಕರಿಸಲಿದ್ದೇನೆ—ಎಂಬ ಆಲೋಚನೆಯಿಂದ ರಾತ್ರಿಯೆಲ್ಲ ನಿದ್ದೆಯಿಲ್ಲದೆ ಕಾಲ ಕಳೆದೆ. ಮರುದಿನ ಬೆಳಿಗ್ಗೆ ಯಾಂತ್ರಿಕವಾಗಿ ಸ್ನಾನಾದಿಗಳನ್ನು ಮುಗಿಸಿ ಶ್ರೀಮಾತೆಯವರ ಬಳಿಗೆ ದೀಕ್ಷೆಗಾಗಿ ಹೋದೆ. ಅವರ ಮುಂದೆ ಕುಳಿತಾಗ ನನ್ನ ತಾಯಿಯ ಮುಂದೆ ನಾನೊಂದು ಚಿಕ್ಕ ಮಗು—ಇಷ್ಟೇ ನನಗೆ ಅರಿವಿದ್ದುದು. ನನಗೆ ಬೇರೇನೂ ಕಾಣಿಸಲಿಲ್ಲ. ತಾಯಿ ದೀಕ್ಷೆ ನೀಡಿದರು. ಇನ್ನೂ ಮಾತು ಬಾರದ ಎಳೆ ಹಸುಳೆ ತಾಯಿಯೊಂದಿಗೆ ಮಾತನಾಡುತ್ತದೆ. ತಾಯಿಗೂ ಗೊತ್ತು, ಮಗುವಿಗೆ ಮಾತು ತಿಳಿಯುವುದಿಲ್ಲವೆಂದು. ಆದರೂ ಆಕೆ ಅದರೊಂದಿಗೆ ಮಾತನಾಡುತ್ತಾಳೆ. ತಾಯಿ-ಮಕ್ಕಳ ನಡುವೆ ಮಾತುಕತೆಗೆ ಯಾವ ಭಾಷೆಯ ಅಗತ್ಯವಿದೆ?" ಎಂದರು.